Regd No M 1299 34 th Year ತಾ 29—3—51

SATYAVADI

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಪಾಕಿಸ್ತಾನ ಭಾರತದ ಮೇಲೆ ಸಮರ ಹೂಡಿದಂತೆಯೆ ಎಂದು ಘೋಷಿಸಿ !

ಮೈಸೂರು ಸರ್ಕಾರಕ್ಕೆ ನಷ್ಟ

ಪಾನ ಪ್ರತಿಬಂಧಕ್ರಮದಿಂದ ಈಗ ಮೈಸೂರು ಸಂಸ್ಥಾನದಲ್ಲಿ ಆಗುತ್ತಿರುವ ನಷ್ಟ ರೂ. 21035000 ಎಂದು ಬೆಂಗಳೂರು ವಾರ್ತೆ.

ಪಾಪ ಮುಗಿಯಿತು

ಅಪೀಲ್ ಕೇಸ್‌ನಲ್ಲಿ ಬೆಂಗಳೂರು ಅಡಿಷನಲ್ ನ್ಯಾಯಾಧೀಶರ ಮುಂದೆ ಶ್ರೀ ಎಲ್. ಎಸ್. ರಾಜುರವರ ಪರ ವಕೀಲರ ವಾದ ನಿನ್ನೆಗೆ ಮುಗಿಯಿತು.

ಚುನಾವಣೆಅಕ್ರಮ ಬೇರೆ ನಡೀಲಿ

ಮಾಜಿ ಪ್ರಧಾನಿ ಸುಹ್ರವರ್ದಿಯವರು ಮೊನ್ನೆ ಕರಾಚಿಯಲ್ಲಿ ಹೇಳಿಕೆ ಇತ್ತು. ಪಶ್ಚಿಮ ಪಂಜಾಬ್‌ನಲ್ಲಿ ಇತ್ತೀಚಿಗೆ ಜರುಗಿದ ಚುನಾವಣೆ ಕ್ರಮಬದ್ಧವಲ್ಲವೆಂದಿವರು. ಪುನಃ ಚುನಾವಣೆ ಜರುಗಲೆಂದು ಅವರು ಹೇಳಿದ್ದಾರೆ.

ಆ ಚೀಣ ಈಗಿಲ್ಲವೇ ಇಲ್ಲ

ಶ್ರೀ ಓರ್ವ ಲ್ಯಾಟಿಮೋರ್ ಲೇಕ್ ಸಕ್ಸಸ್‌ನಲ್ಲಿ ಮೊನ್ನೆ ಹೇಳಿಕೆಯಿತ್ತು ರಾಷ್ಟ್ರೀಯ ಚೀಣವನ್ನು ಸ್ಮೃತಿಯಿಂದ ಅಳಿಸಿಬಿಡಿ— ಎಂದಿದ್ದಾರೆ. ಹೇಳಿಕೆ ಹೊರಡಿಸಿದವರು ಏಷ್ಯ ಬಗ್ಗೆ ತಜ್ಞರಾಗಿರುವ ಅಮೇರಿಕಾದವರು.

ಪಂಜಾಬಿನ ಚುನಾವಣೆ

ಪಶ್ಚಿಮ ಪಂಜಾಬಿನಲ್ಲಿ ವಕೆದಾರರ ಸಂಖ್ಯೆ 90 ಲಕ್ಷ. ವಾರನೆ ಎರಡು ಭಾಗದಷ್ಟು ಮಂದಿ ಮತದಾರರು ಮತ ಹಾಕಿಲ್ಲ. ಒಟ್ಟು ಸ್ಥಾನಗಳು 197 ಆ ಪೈಕಿ ಮುಸ್ಲಿಂ ಲೀಗ್‌ಗೆ 140 ಸ್ಥಾನಗಳು. ಮುಸ್ಲಿಂ ಲೀಗ್‌ನ ಪಾದಂತಿದ್ದ ಖಾಜೋರ್‌ನಲ್ಲಿ ಮಾತ್ರ ಶೇ 80 ಸ್ಥಾನಗಳು ಲೀಗ್‌ಗೆ ಹೋಗಿವೆ.

ಭಾರತ ಪಾರ್ಲಿಮೆಂಟ್‌ನಲ್ಲಿ ನಿನ್ನೆ ಮಾಜಿ ಸಚಿವ ಡಾ|| ಶಾಂ ಪ್ರಸಾದ ಮುಖರ್ಜಿಯವರು ವಿದೇಶ ಖಾತೆ ಕೇಳಿಕೆಗಳ ಬಗ್ಗೆ ಅಭಿಪ್ರಾಯ ಕೊಡುತ್ತಾ ವಿಶ್ವಭದ್ರತಾ ಮಂಡಲದಿಂದ ಕಾಶ್ಮೀರ ಪ್ರಶ್ನೆಯನ್ನು ವಾಪಸು ಪಡೆಯಬೇಕೆಂದರು. ಕಾಶ್ಮೀರದಲ್ಲಿ ಆಕ್ರಮಣ ಮಾಡಿರುವ ಪ್ರದೇಶವನ್ನು ಪಾಕೀಸ್ತಾನ ತಕ್ಷಣವೇ ಬಿಟ್ಟುಬಿಡಬೇಕು. ಪಾಕೀಸ್ತಾನ ಹಾಗೇನಾದರೂ ಮಾಡದಿದ್ದಲ್ಲಿ, ಭಾರತದ ಮೇಲೆ ಸಮರ ಹೂಡಿದಂತೆಯೇ ಎಂದು ಘೋಷಿಸಬೇಕೆಂದರು.

ಕೆಂಪು ಸೇನೆಗಳ ಜಮಾವಣೆ

ಅಮೇರಿಕ ವಕ್ತಾರರೊಬ್ಬರು ನಿನ್ನೆ ಟೋಕಿಯೋದಲ್ಲಿ ಹೇಳಿಕೆ ಕೊಟ್ಟು ಕೇಂದ್ರ ಕೊರಿಯದಲ್ಲಿ ಕೆಂಪು ಚೀಣದ 90 ಸಹಸ್ರ ಮಂದಿ ಸೇನಿಕರು ಸಮರ ಸಿದ್ಧರಿರುವದಾಗಿ ತಿಳಿಸಿದರು.

ಪಾನ ಪ್ರತಿಬಂಧ ಪ್ರಗತಿ

ಮೈಸೂರು ಸಂಸ್ಥಾನದ ಮತ್ತೊಂದು ಜಿಲ್ಲೆಯಲ್ಲಿ ಕುಡಿತ ನಿರೋಧಿಸುವ ಆಜ್ಞೆಯನ್ನು ಜಾರಿಗೆ ತರುವ ಕರಿತು ಸರ್ಕಾರ 3-4 ದಿವಸಗಳಲ್ಲಿ ತೀರ್ಮಾನ ಮಾಡಲಿದೆ.

ಪಾಕ್ ಒಪ್ಪಬಹುದು !

ಪಾಕೀಸ್ತಾನ ಕೇಂದ್ರ ಸರ್ಕಾರ ಕಾಶ್ಮೀರದ ವಿಷಯದಲ್ಲಿ ಬ್ರಿಟಿಷ್-ಅಮೇರಿಕ ಮಾಡಿರುವ ಸಲಹೆಯನ್ನು ಅಂಗೀಕರಿಸಬಹುದೆಂದು ಕರಾಚಿ ಸುದ್ದಿ ತಿಳಿಸುತ್ತದೆ

× ಈ ವರ್ಷ ನವೆಂಬರ್ ಮತ್ತು ಡಿಸೆಂಬರ್‌ಗಳಲ್ಲಿ ಮಹಾ ಚುನಾವಣೆ ಜರುಗುವ ಬಗೆಗೆ ಸಕಲ ಏರ್ಪಾಟುಗಳು ನೆಮ್ಮೇರುತ್ತಿರುವದಾಗಿ ದೆಹಲಿ ವಾರ್ತೆ.

ಹೌರಾ ಚುನಾವಣೆಯಲ್ಲಿ ಕಾಂಗ್ರೆಸಿಗೆ ಅಲ್ಪಮತ !

ದಿವ್ಯ ವಾಣಿ

ಪ್ರಜೆಗಳ ಪ್ರತಿನಿಧಿಗಳು ರಾಜ್ಯಭಾರ ವಹಿಸಿಕೊಳ್ಳುವದಕ್ಕೆ ಮೊದಲು ಆಯಾ ಪದವಿಗಳಿಗೆ ತಾವು ಯೋಗ್ಯರೇ ? ಎಂಬುದನ್ನು ಆಲೋಚಿಸಿ ವಹಿಸಿಕೊಳ್ಳಬೇಕು. ಆಗ ರಾಜ್ಯಭಾರ ನಿರ್ವಹಣೆ ಹುಡುಗಾಟಿಕೆಯಾಗದು.

— ಗಾಂಧೀಜಿ

ಈಗ ಹೆಚ್ಚು ಕೆಟ್ಟ ಸ್ಥಿತಿ

ಈಗ ವಿಶ್ವದ ಪರಿಸ್ಥಿತಿ ಮತ್ತೂ ಕೆಟ್ಟಿರುವದಾಗಿ ಅಮೇರಿಕದ ವಿದೇಶ ಸಚಿವ ಪ್ರ|| ಮಾರ್ಷಲ್ ವಾಷಿಂಗ್ಟನ್ನಲ್ಲಿ ತಿಳಿಸಿದ್ದಾರೆ ಕೊರಿಯದ 38 ನೇ ರೇಖೆಯನ್ನು ವಿಶ್ವಸಂಸ್ಥೆ ಸೇನೆಗಳು ಹಾದು ಹೋಗುವ ವಿಷಯ ರಾಜಕೀಯ ದೃಷ್ಟಿಯಿಂದ ಪರಿಶೀಲಿಸಲ್ಪಡಬೇಕೆಂದರವರು.

ಬಂಧಿಸಲ್ಪಟ್ಟ

ಮದರಾಸಿನ ನೆಹರು ಪೇಟೇಲಿದ್ದ ನೆಹರು ಚಿತ್ರದ ಮುಖ ಭಂಗ ಮಾಡಿದ ಬಗ್ಗೆ ಓರ್ವ ದಸ್ತಗಿರಿಯಾದ

ಯೋಧರಿಗೆ ಹಿತೋಕ್ತಿ

ರಾಜಕೀಯ ಯೋಧರಿಗೆ ಸಲ್ಲದೆಂದು ಪಂ|| ನೆಹರು ದೆಹಲಿಯಲ್ಲಿ ನಿನ್ನೆ ತಿಳಿಸಿದ್ದಾರೆ.

ಸೋಲಾಪುರದಲ್ಲಿ ಸಂಪು

ಬೇಡಿಕೆಗಳು ನೆರವೇರಲಿಲ್ಲವೆಂದು ಸೋಲಾಪುರ ಪ್ರಾಥಮಿಕ ಶಾಲೆ ಉಪಾಧ್ಯಾಯರು ಮುಂದಿನ ಮಾಹೆ ತಾ|| 10 ರಿಂದ ಮುಷ್ಕರ ಹೂಡುವವರಿದ್ದಾರೆ.

ಇಲ್ಲಿಗೂ ಐನೂರು ಟ್ಯಾ

ವದರಾಸಿಗೆ ಬಂದಿರುವ ಅರ್ಜಂಟ್ಟೈನ ಗೋಧಿ ಪೈಕಿ ಮೈಸೂರಿಗೆ ಪಾಲಿದೆ.

ಕಡೇ ಪಕ್ಷ.....!

ತಲಾ 2 ಷರ್ಟಿಗಾಗಿಗೋ ಒಟ್ಟಿ, 1 ಜೊತೆ ಪಂಚೆ ಈ ಉಗಾದಿಗೆ ಮೈಸೂರಿನ ವಾಗರಕರಿಗೆ ದ ಬಾರಿಯಿಲ್ಲದ ಬೆಲೆಗೆ ಸಿಗುವ ಏರ್ಪಾಟಾಗಬೇಕು.

ಸಂಯುಕ್ತ ಪಕ್ಷಕ್ಕೆ ಬಹುಮತ

ಹೌರಾ ಪೌರಸಭೆ ಚುನಾವಣೆ ಎಣಿಕೆ ಮುಗಿಯಿತು. ಕಾಂಗ್ರೆಸಿಗೆ ಕೇವಲ 14 ಸ್ಥಾನಗಳು ಸಿಕ್ಕಿವೆ. ಸಂಯುಕ್ತ ವಾಮ ಪಕ್ಷಕ್ಕೆ 16 ಸ್ಥಾನಗಳು ಸಿಕ್ಕಿ ಬಹುಮತ ಪಡೆದಿದೆ. ಹೋದ ಬಾರಿ ಎಲ್ಲ ಸ್ಥಾನಗಳಿಗೂ ಕಾಂಗ್ರೆಸ್ಸೇ ಆರಿಸಿ ಬಂದಿತ್ತು.

ಸಹಸ್ರ ಮೊರಿ ಬಂಧನ

ಕಮ್ಯುನಿಸ್ಟರು ನುತ್ತು ಅವರ ಸಹಾನುಭೂತಿಯುಳ್ಳವರೆಂದು ಕಳೆದ 2 ತಿಂಗಳಲ್ಲಿ ಕಾನುರಿನ ಜಿಲ್ಲೆಯೊಂದರಲ್ಲಿ 1066 ಮಂದಿ ಬಂಧಿತರಾದರೆಂದು ಗೌಹತಿ ವರದಿ ತಿಳಿಸುತ್ತದೆ.

ವಿದೇಶಿಗಳಿಗೆ ವಿನಾಯಿತಿ

ವಿದೇಶ ಪ್ರವಾಸಿಕರಿಗೆ ಕುಡಿತ ನಿರೋಧ ಶಾಸನ ಅನ್ವಯಿಸುವದಿಲ್ಲವೆಂದು ನಾಗಪುರ ವಾರ್ತೆ.

ಮದರಾಸಿನಲ್ಲಿ ಅಕ್ಕಿ ಪಡಿತರ

ಮದರಾಸಿನಲ್ಲಿ 8 ಔನ್ಸ್ ಅಕ್ಕಿ ಬೀಗನೆ ಜನರಿಗೆ ಸಿಕ್ಕಲಿದೆ.

ಆಹಾರ ಸಮಸ್ಯೆಯ ನಿಜ ಸ್ವರೂಪ, (೩)

ಹೆಚ್ಚು ಆಹಾರಕ್ಕಾಗಿ ಸರಕಾರದವರು ೧೨ ಕೋಟಿ ರೂಪಾಯಿಷ್ಟನ್ನು ಖರ್ಚು ಮಾಡಿರುತ್ತಾರೆ ; ಅಂದರೆ ಸಂಸ್ಥಾನದ ೯೧ ಲಕ್ಷ ಜನಗಳಿಗೆ ಸುಮಾರು ೧೨ ರೂಪಾಯಿಗಳಿಗಿಂತ ಸ್ವಲ್ಪ ಹೆಚ್ಚಾಗಿಯೇ ಖರ್ಚು ಮಾಡಿದಂತಾಯಿತು. ಎಷ್ಟೇ ಹಣವನ್ನು ಖರ್ಚುಮಾಡಿಯಾದರೂ ಜನಗಳಿಗೆ ಆಹಾರವನ್ನು ಒದಗಿಸಬೇಕೆಂಬ ಉದ್ದೇಶವು ಸಾಧುವಾದುದು ; ಹೊಗಳತಕ್ಕದ್ದು : ಆದರೆ ಸದ್ವಿನಿಯೋಗವಾಗಲಿಲ್ಲವೆಂದೂ ಜಮೀನು ಸಾಗುವಳಿಯು ಹಿಂದೆ ಇದ್ದುದಕ್ಕಿಂತ ಕಮ್ಮಿ ಎಕ್ರೇಜು ಸಾಗುವಳಿಯಾಗಿ ಹಣದ ನಷ್ಟದ ಜೊತೆಯಲ್ಲಿ ಪ್ರಜೆಗಳಿಗೆ ಕಷ್ಟವೂ ಹೆಚ್ಚಿತೆಂಬುದು ಸ್ಪಷ್ಟವಾಗಿದೆ.

ಇನ್ನು ಭತ್ತ, ರಾಗಿ, ಜೋಳಗಳ ವಿಷಯವನ್ನು ನೋಡೋಣ. ೫ ವರ್ಷಗಳ ಹಿಂದೆ ೮೧೬೦೦೦ ಎಕರೆ ಜಮೀನಿನಲ್ಲಿ ಬತ್ತವನ್ನು ಬೆಳೆಸಲಾಗಿತ್ತು ; ಆದರೆ ಕಳೆದ ವರ್ಷ ೭೧೫೦೦೦ ಮಾತ್ರ ಸಾಗುವಳಿಯಾಗಿದೆ ರಾಗಿ ೨೫೧೭೦೦೦ ಎಕರೆಯಲ್ಲಿ ಹಿಂದೆ ಬೆಳೆಸಿದ್ದರೆ ಕಳೆದ ವರ್ಷ ೧೭೪೪೦೦೦ ಎಕರೆ ಮಾತ್ರ,

—

ಸಾಗುವಳಿಯಾಗಿದೆ. ಅನ್ನುವಾಗ ಬತ್ತದಲ್ಲಿ ಒಂದು ಲಕ್ಷ ಐದು ಸಾವಿರ ಎಕರೆಯೂ, ರಾಗಿಯಲ್ಲಿ ಐದು ಲಕ್ಷ ಅರವತ್ತೆಂಟು ಸಾವಿರ ಎಕರೆಯೂ ಸಾಗುವಳಿ ಕಡಮೆಯಾದಂತಾಯಿತು. ಜೋಳವು ೬೬೦೦೦ ಎಕರೆಯಲ್ಲಿ ಬೆಳೆಸಿದ್ದು ಕಳೆದ ಸಾಲಿನಲ್ಲಿ ೪೯೦೦೦ ಎಕರೆಯಲ್ಲಿ ಮಾತ್ರ ಬೆಳೆಸಿದೆ : ಅಂದರೆ ಒಂದು ಲಕ್ಷ ಎಪ್ಪತ್ತು ಸಾವಿರ ಎಕರೆಗಳಲ್ಲಿ ಬೆಳೆಸಿಲ್ಲ. 'ಹೆಚ್ಚು ಆಹಾರ ಬೆಳೆಯಿರಿ' ಘೋಷಣೆಗೆ ಅನುಸಾರವಾಗಿ, ಪ್ರಚಾರಕ್ಕೆ ಅನುಗುಣವಾಗಿ, ವೆಚ್ಚಮಾಡುವ ಹಣಕ್ಕೆ ತಕ್ಕಂತೆ ನೋಡುವುದಾದರೆ ಹಿಂದೆ ಆಗಿರುವುದಕ್ಕಿಂತ ನಾಲ್ಕು ಪಾಲು ಹೆಚ್ಚು ಜಮೀನು ಸಾಗುವಳಿಯಾಗಿ ಅದಕ್ಕೆ ತಕ್ಕಂತೆ ಬೆಳೆ ಸಿಕ್ಕಬೇಕಾಗಿತ್ತು ; ಆದರೆ ಮೇಲಿನ ಅಂಕಿಗಳನ್ನು ನೋಡಿದರೆ, ಹೆಚ್ಚು ಜಮೀನು ಸಾಗುವಳಿಯಾಗುವ ಬದಲಿಗೆ, ಹೆಚ್ಚು ಬೆಳೆ ಸಿಕ್ಕುವ ಬದಲಿಗೆ ಹಿಂದೆ ಆದುದಕ್ಕಿಂತ ಕಡಮೆ ಯೇ ಸಾಗುವಳಿಯಾಗಿದೆಯೆಂದರೆ 'ಬರಬರುತ್ತಾ ರಾಯರ ಕುದುರೆ ಕತ್ತೆಯಾಯಿತು' ಎಂಬ ಗಾದೆಯು ನೆನಪಿಗೆ ಬರುತ್ತದೆ.

ಇನ್ನು ಸಾಗುವಳಿಯಾದ ಜಮೀನಿನಿಂದ ಸಂಗ್ರಹಿಸಿದ ದವಸದ ಅಂಕಿಗಳು ಮತ್ತೂ ಕುತೂಹಲಜನಕವಾಗಿವೆ— ಕಳೆದ ವರ್ಷ ೭೧೫೦೦೦ ಎಕರೆ ಜಮೀನಿನಲ್ಲಿ ಬತ್ತದ ಸಾಗುವಳಿಯಾಗಿದೆ : ಬತ್ತವು ಸಾಧಾರಣವಾಗಿ ಎಕರೆ ಒಂದಕ್ಕೆ ೧೫ ರಿಂದ ೨೦ ಪಲ್ಲಗಳವರೆಗೂ ಬೆಳೆಯುತ್ತದೆ ಎಂಬ ವಿಷಯವು ವ್ಯವಸಾಯ ಮಾಡುವವರಿಗೆಲ್ಲಾ ತಿಳಿದ ವಿಷಯವೇ ಆಗಿದೆ. ಹೆಚ್ಚು ಕಮ್ಮಿ ಬೆಳೆ ಬರುವ ವಿಷಯವನ್ನೇ ಬಿಟ್ಟುಬಿಟ್ಟು ಸರಾಸರಿ ಎಕರೆಯೊಂದಕ್ಕೆ ೧೫ ಪಲ್ಲದಂತೆ ಉತ್ಪನ್ನವನ್ನು ಹಿಡಿಯಬಹುದು ; ಹಾಗೂ ಬೆಳೆ ಕೆಟ್ಟುಹೋದ ಇತ್ಯಾದಿ ಕಾರಣಗಳಿಗಾಗಿ ಮತ್ತೂ ಸ್ವಲ್ಪ ಬೆಟ್ಟುಕೊಟ್ಟರೂ, ಎಕರೆಗೆ ಸರಾಸರಿ ೧೦ ಪಲ್ಲದಂತೆ ಪರ್ವಿವಾದವಾಗಿ ಹಿಡಿಯಬಹುದು. ಅದರಂತೆ ಲೆಕ್ಕ ಮಾಡಿದರೆ ೭೧೫೦೦೦ ಲಕ್ಷ ಪಲ್ಲ ಬತ್ತ ಸರಕಾರಕ್ಕೆ ಸಿಕ್ಕಬೇಕು ; ಆದರೆ ಸರಕಾರದವರು ಸಂಗ್ರಹಿಸಿರುವುದು ೧೬೬೦೦೦ ಪಲ್ಲ ಒತ್ತ ಮಾತ್ರ ; ಅಂದರೆ ಎಕರೆಯೊಂದಕ್ಕೆ ಎರಡೂಕಾಲು ಪಲ್ಲದಷ್ಟು ಬತ್ತವನ್ನು ಸಂಗ್ರಹಿಸಿದಂತಾಗಿದೆ

[ಮುಂದುವರಿಯುವುದು

ಉಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ವನಸುಂದರಿ ❁ Vanasundari

ಪಿ. ಯು ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಬಾಲಯ್ಯ ಪುಳಿಮೂಟಿ
ಕೃಷ್ಣ, ಮಧುರಂ, ಲಲಿತ, ಪದ್ಮಿನಿ ಅಭಿನಯಿಸಿರುವರು

ಅಮೋಘ ಶಮಿಳು ಚಿತ್ರ — ಪ್ರತಿ ದಿನ 3 ಆಟಗಳು ; ಮ್ಯಾಟಿನಿ 3 ಗಂಟೆಗೆ

— ಬೆಳಗಿನ ಪ್ರದರ್ಶನ — 30—3—51 ರಿಂದ 3 ದಿನಗಳು

"ಅಡ್ವೆಂಚರ್ಸ್ ಆಫ್ ಕ್ಯಾಪ್ಟನ್ ಮಾರ್ವೆಲ್" (ರಿಪಬ್ಲಿಕ್ ಸೀರಿಯಲ್)

ರಣಜಿತ್ ಕೀರ್ತಿಯುತ 4 ನೇ ವಾರ

ನರ್ಗಿಸ್, ದಿಲೀಪ್ ಕುಮಾರ್, ಮನ್ವರ್ ಸುಲ್ತಾನ ಪಾತ್ರವಹಿಸಿರುವ

BABUL ❁ ಬಾಬುಲ್

ಅಮೋಘ ಹಿಂದಿ ಚಿತ್ರ — — ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 30—3—51 ರಿಂದ 3 ದಿವಸಗಳು

"ದರ್ದ್" (ಹಿಂದಿ) ಪಾತ್ರ— ಮನ್ವರ್ ಸುಲ್ತಾನ್, ಸೂರ್ಯಾ

Edited, Printed and Published by M. S. Krishna Rao. at the Satyavadi Press Chamrajpuram Mysore

"ಗೋರಕ್ಷಣ"

ಪ್ರತಿ ತಿಂಗಳ ತಾ|| 1 ರಲ್ಲಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ, ಪಾಶ್ಚಾತ್ಯದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ : 'ಗೋರಕ್ಷಣ' ಸತ್ಯವಾದಿ ಆಫೀಸ್, ಚೆಮ್ಮರಾಜಪುರಂ ಮೈಸೂರು

Announcement

Theatre building old materials and furniture are being sold very cheap

Apply to—
NEW OPERA TALKIES
MYSORE

ಏನೆನೂ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

ಅಮೋಘಕರ ಗ್ರಾಹಕರಿಗೆ ಹಾಗೂ ಉಪನ್ಯಾಸಕಿ ಪೆರ್ಲ್. ಕರ್